# ಕರ್ನಾಟಕ ವಿಧಾನ ಪರಿಷತ್ತು

1. **ಸದಸ್ಯರ ಹೆಸರು** : ಶ್ರೀ ಸುನೀಲ್ ವಲ್ಯಾಪುರ
   (ವಿಧಾನ ಸಭೆಯಿಂದ ಚುನಾಯಿತರಾದವರು)
2. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1162
3. **ಉತ್ತರಿಸಬೇಕಾದ ದಿನಾಂಕ** : 15.12.2023

<table>
<tr><th>ಕ್ರ.ಸಂ</th><th>ಪ್ರಶ್ನೆ ಸಂಖ್ಯೆ-1045 (1162)</th><th>ಉತ್ತರ</th></tr>
<tr><td>ಅ)</td><td>ಕೋವಿಡ್ ಸಂದರ್ಭದಲ್ಲಿ ಜನ ನಗರ ಪ್ರದೇಶದಿಂದ ಗ್ರಾಮೀಣ ಪ್ರದೇಶಗಳಿಗೆ ವಲಸೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ.</td><td>ಸರ್ಕಾರದ ಗಮನಕ್ಕೆ ಬಂದಿದೆ.<br>ಕೋವಿಡ್-19 ಸಂದರ್ಭದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಈ ಕೆಳಗಿನಂತೆ ಉದ್ಯೋಗ ಕಲ್ಪಿಸಲಾಗಿದೆ.
<table>
<tr><td rowspan="2">ಆರ್ಥಿಕ ಸಾಲು</td><td colspan="4">ಲಕ್ಷಗಳಲ್ಲಿ</td></tr>
<tr><td>ಹೊಸ ಕುಟುಂಬಗಳ ಸೇರ್ಪಡೆ</td><td>ಹೊಸ ಕೂಲಿಕಾರರ ಸೇರ್ಪಡೆ</td><td>ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ</td><td>ಉದ್ಯೋಗ ಪಡೆದ ಜನರ ಸಂಖ್ಯೆ</td></tr>
<tr><td>2020-21</td><td>7.37</td><td>17.33</td><td>30.15</td><td>56.69</td></tr>
<tr><td>2021-22</td><td>5.01</td><td>12.11</td><td>33.85</td><td>63.61</td></tr>
</table></td></tr>
<tr><td>ಆ)</td><td>ಪ್ರಸ್ತುತ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ನಿಗದಿಪಡಿಸಲಾದ ಕೂಲಿ ದರ ಎಷ್ಟು? ಸದರಿ ಕೂಲಿ ಕಾರ್ಮಿಕರಿಗೆ ಬೆಲೆ ಸೂಚ್ಯಂಕದನ್ವಯ ಕೂಲಿ ಮೊತ್ತ ಹೆಚ್ಚಳ ಮಾಡಲಾಗಿದೆಯೇ: ಕಳೆದ ಐದು ವರ್ಷಗಳಲ್ಲಿ ಕಾಲ ಕಾಲಕ್ಕೆ ಹೆಚ್ಚಳ ಮಾಡಲಾದ ಕೂಲಿ ದರ ಎಷ್ಟು: (ಸಂಪೂರ್ಣ ಮಾಹಿತಿ ನೀಡುವುದು)</td><td>ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ನಿಗದಿಪಡಿಸಲಾಗಿರುವ ಪ್ರಸ್ತುತ ಕೂಲಿ ದರ- ರೂ.316 /-<br>ಕಳೆದ 05 ವರ್ಷಗಳಲ್ಲಿ ಗ್ರಾಹಕ ದರ ಸೂಚ್ಯಂಕದನ್ವಯ (ಕೃಷಿ ಮತ್ತು ಗ್ರಾಮೀಣ ಕಾರ್ಮಿಕರು) ಕೇಂದ್ರ ಸರ್ಕಾರದಿಂದ ಕಾಲ ಕಾಲಕ್ಕೆ ಹೆಚ್ಚಳ ಮಾಡಲಾಗಿರುವ ಕೂಲಿ ದರ ಈ ಕೆಳಗಿನಂತಿದೆ.
<table>
<tr><th>ಆರ್ಥಿಕ ಸಾಲು</th><th>ನರೇಗಾಕೂಲಿ ದರ ರೂ.</th></tr>
<tr><td>2019-20</td><td>249 /-</td></tr>
<tr><td>2020-21</td><td>275 /-</td></tr>
<tr><td>2021-22</td><td>289/-</td></tr>
<tr><td>2022-23</td><td>309/-</td></tr>
<tr><td>2023-24</td><td>316/-</td></tr>
</table></td></tr>
<tr><td>ಇ)</td><td>ನರೇಗಾ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಕೂಲಿ ಹಣ ಮತ್ತು ಸಾಮಗ್ರಿಗಳು ಸಕಾಲದಲ್ಲಿ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು)</td><td>ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಸಂಪೂರ್ಣ ಕೂಲಿ ಮೊತ್ತವನ್ನು ಕೇಂದ್ರ ಸರ್ಕಾರ ಹಾಗೂ ಸಾಮಗ್ರಿ ಮೊತ್ತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇ. 75:25 ಅನುಪಾತದಲ್ಲಿ ಅನುದಾನ ಬಿಡುಗಡೆಗೊಳಿಸುತ್ತಿದೆ. ಬಿಡುಗಡೆಯಾದ ಅನುದಾನವು ಶೇ.75% ರಷ್ಟು ವೆಚ್ಚವಾದ ನಂತರ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಅದರನ್ವಯ ಕೇಂದ್ರ ಸರ್ಕಾರವು ಅನುದಾನ ಬಿಡುಗಡೆಗೆ ಕ್ರಮವಹಿಸುತ್ತಿದೆ. ರಾಜ್ಯ ಸರ್ಕಾರವು ಅನುದಾನ ಬಿಡುಗಡೆಗೆ ನಿರಂತರವಾಗಿ ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮತ್ತು ದೂರವಾಣಿ ಮುಖೇನ ಸಂಪರ್ಕದಲ್ಲಿದ್ದು, ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತದೆ.<br>ಕೂಲಿ ಅನುದಾನಕ್ಕೆ ಸಂಬಂಧಿಸಿದಂತೆ 100% ರಷ್ಟು ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿದ್ದು, ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆಯಾಗುತ್ತಿರುತ್ತದೆ. ದಿನಾಂಕ: 01.11.2023 ರಂದು ರೂ. 672.80 ಕೋಟಿಯಷ್ಟು ಅನುದಾನ ಬಿಡುಗಡೆಗೆ ಬಾಕಿಯಿತ್ತು, ಸದರಿ ದಿನಾಂಕದಂದು ಕೇಂದ್ರ ಸರ್ಕಾರವು ರೂ. 752.08 ಕೋಟಿ ಅನುದಾನ ಮತ್ತು ದಿನಾಂಕ 23.11.2023 ರಂದು ರೂ. 226.00 ಕೋಟಿಯಷ್ಟು ಕೂಲಿ ಅನುದಾನಕ್ಕೆ Mother Sanction ನೀಡಿದ್ದು, ದಿನಾಂಕ: 02.12.2023 ರವರೆಗೆ ದಿನವಾರು ರೂ. 511.09 ಕೋಟಿಯಷ್ಟು ಬ್ಯಾಂಕಿಗೆ</td></tr>
</table>

| | | |
|---|---|---|
| | | ಜಮೆಯಾಗಿರುತ್ತದೆ. ರೂ. 466.99 ಕೋಟಿ ಅನುದಾನವು ಕೇಂದ್ರ ಸರ್ಕಾರದಿಂದ ಬಿಡುಗಡೆಗೊಳ್ಳಬೇಕಿದ್ದು, ದಿನವಾರು ಬಾಕಿಯಿರುವ ಕೂಲಿ ಮೊತ್ತವು ಬಿಡುಗಡೆಯಾಗುತ್ತಿರುತ್ತದೆ. ಶೇ. 75%ರಷ್ಟು ಅನುದಾನವು ಬಿಡುಗಡೆಯಾದ ನಂತರ ಕೇಂದ್ರ ಸರ್ಕಾರಕ್ಕೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿ ಅನುದಾನ ಬಿಡುಗಡೆಗೆ ರಾಜ್ಯ ಸರ್ಕಾರವು ಕ್ರಮವಹಿಸುತ್ತಿರುತ್ತದೆ.<br>ಸಾಮಾಗ್ರಿ ವೆಚ್ಚಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ದಿನಾಂಕ:07.08.2023 ರಂದು ರೂ.1053.51 ಕೋಟಿ ಅನುದಾನ ಮತ್ತು ದಿನಾಂಕ:17.08.2023 ರಂದು ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.351.17 ಕೋಟಿ ಒಟ್ಟು ರೂ.1404.68 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಸದರಿ ಮೊತ್ತದಲ್ಲಿ ಶೇ.75 ರಷ್ಟು ವೆಚ್ಚವಾದ ನಂತರ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಅನುದಾನ ಬಿಡುಗಡೆಗೆ ಕ್ರಮವಹಿಸುತ್ತಿರುತ್ತದೆ. |
| **ಈ)** | ನರೇಗಾ ಯೋಜನೆಯ ಕೂಲಿ ಕಾರ್ಮಿಕರಿಗೆ ಕಾಮಗಾರಿ ಸ್ಥಳದಲ್ಲಿ ಬಯೋಮೇಟ್ರಿಕ್ ಹಾಜರಾತಿ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? | ಕೇಂದ್ರ ಸರ್ಕಾರದ ನಿರ್ದೇಶನದಂತೆ ಯೋಜನೆಯಡಿ ಅನುಷ್ಠಾನವಾಗುತ್ತಿರುವ ಎಲ್ಲಾ ಸಮುದಾಯ ಕಾಮಗಾರಿಗಳಿಗೆ ಕೂಲಿಕಾರರ ಛಾಯಾಚಿತ್ರವನ್ನು ಸೆರೆಹಿಡಿಯುವ ಮುಖಾಂತರ ಹಾಜರಾತಿಯನ್ನು ಪಡೆಯುವ ವ್ಯವಸ್ಥೆಗೆ National Mobile Monitoring System (NMMS) App ಬಳಸಲಾಗುತ್ತಿದೆ..<br>ಪ್ರಸ್ತುತ NMMS App ನಲ್ಲಿ ಬಯೋಮೆಟ್ರಿಕ್ ಹಾಜರಾತಿ ಪಡೆಯುವ ವ್ಯವಸ್ಥೆ ಇರುವುದಿಲ್ಲ. ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ ಕೇಂದ್ರ ಸರ್ಕಾರದ ಹಂತದಲ್ಲಿ ನಿರ್ಧಾರವಾಗಬೇಕಿರುತ್ತದೆ. |
| **ಉ)** | ನರೇಗಾ ಯೋಜನೆಯನ್ನು ನಗರ ಪ್ರದೇಶದಲ್ಲಿ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯು ಪ್ರಸ್ತುತ ಗ್ರಾಮೀಣ ಪ್ರದೇಶಗಳಲ್ಲಿ ಚಾಲ್ತಿಯಲ್ಲಿದೆ. ಈ ಯೋಜನೆಯನ್ನು ನಗರ ಪ್ರದೇಶದಲ್ಲಿ ವಿಸ್ತರಿಸುವ ಕುರಿತು ಸರ್ಕಾರದ ಹಂತದಲ್ಲಿ ತೀರ್ಮಾನವಾಗಬೇಕಿರುತ್ತದೆ. |

**ಸಂಖ್ಯೆ: ಗ್ರಾಅಪ/622/ಉಖಾಯೋ/2023 (E-1251413)**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.